ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH BENGALURU CITY UNIVERSITY
BE BOUNDLESS
Office of the Registrar(Evaluation), Jnana Jyothi Central College Campus, Dr. B.R AmbedkarVeedhi, Bengaluru – 560 001.E-mail: registrarevlubcu@gmail.com, Ph.No.080-22295559

ಸಂಖ್ಯೆ:ಡಾ.ಮ.ಸಿಂ.ಬೆಂ.ನ.ವಿ/ಪ.ವಿ/01/2025-26 /1654 ದಿನಾಂಕ: 05.03.2026

# ಸುತ್ತೋಲೆ

**ವಿಷಯ:** 2025-26ನೇ ಸಾಲಿನ ಗಣಿತ ವಿಷಯದ 1, 3 ಮತ್ತು 5ನೇ ಸೆಮಿಸ್ಟರ್ (ಫ್ರೆಷರ್ಸ್ & ರಿಪೀಟರ್ಸ್) UUCMS ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಕ್ಕೆ ಅಧ್ಯಾಪಕರನ್ನು ಕಡ್ಡಾಯವಾಗಿ ಕಳುಹಿಸಿಕೊಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸುವುದೇನೆಂದರೆ, ಡಿಸೆಂಬರ್-2025/ಜನವರಿ-2026ರಲ್ಲಿ ನಡೆದಿರುವ ಗಣಿತ ವಿಷಯದ 1, 3 ಮತ್ತು 5ನೇ ಸೆಮಿಸ್ಟರ್ (ಫ್ರೆಷರ್ಸ್ & ರಿಪೀಟರ್ಸ್) UUCMS ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಆರಂಭಿಸಿ ಶೀಘ್ರವಾಗಿ ಫಲಿತಾಂಶಗಳನ್ನು ಪ್ರಕಟಿಸಬೇಕಿದೆ.

ಆದುದರಿಂದ ಮೌಲ್ಯಮಾಪನ ಕಾರ್ಯ ಈಗಾಗಲೇ ಆರಂಭವಾಗಿದ್ದು, ಗಣಿತ ವಿಷಯದ ಉತ್ತರ ಪತ್ರಿಕೆಗಳು (Answer Scripts) ಹೆಚ್ಚಿರುವುದರಿಂದ ಎಲ್ಲಾ ಅರ್ಹ ಅಧ್ಯಾಪಕರು ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು/ ಸೂಚಿಸಬೇಕೆಂದು ಕೋರಲಾಗಿದೆ. ಗಣಿತ ವಿಷಯದ 1, 3 ಮತ್ತು 5ನೇ ಸೆಮಿಸ್ಟರ್ (ಫ್ರೆಷರ್ಸ್ & ರಿಪೀಟರ್ಸ್) UUCMS ಪರೀಕ್ಷೆಗಳ ಮೌಲ್ಯಮಾಪನ ಕಾರ್ಯವು ಪರೀಕ್ಷಾ ವಿಭಾಗ, ನ್ಯಾಚುರಲ್ ಕಟ್ಟಡ **(Stone Building),** ಸೆಂಟ್ರಲ್ ಕಾಲೇಜ್, ಡಾ. .ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ನಡೆಯುತ್ತಿದ್ದು, ಆಯಾ ವಿಷಯಗಳ ಮೌಲ್ಯಮಾಪಕರು ತಪ್ಪದೇ ಹಾಜರಾಗಿ ವಿದ್ಯಾರ್ಥಿಗಳ ಮತ್ತು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕೆಂದು ಕೋರಲಾಗಿದೆ.

ಯಾವ ಕಾಲೇಜುಗಳಿಂದ ಅಧ್ಯಾಪಕರು ಮೌಲ್ಯಮಾಪನ ಕಾರ್ಯ ನಿರ್ವಹಿಸಲು ಬರದೇ ಇರುವ ಕಾಲೇಜಿನ ಫಲಿತಾಂಶವನ್ನು ಯಾವುದೇ ಕಾರಣಕ್ಕೂ ಪ್ರಕಟಿಸಲಾಗುವುದಿಲ್ಲ.

KSU Act 2000 Section 73, 74 & 75 ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕೈಪಿಡಿ 2018ರ ಪ್ರಕಾರ, ಪರೀಕ್ಷೆಯ ಕೆಲಸ ಕಡ್ಡಾಯವಾಗಿದ್ದು, ಎಲ್ಲಾ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಸೂಚಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ.

ಆದುದರಿಂದ, ದಯಮಾಡಿ ತಾವು ಈ ವಿಚಾರದಲ್ಲಿ ಸಕ್ರಿಯ ಸಹಕಾರ ನೀಡಬೇಕೆಂದು ಕೋರಿದೆ.

ಕುಲಸಚಿವರು (ಮೌಲ್ಯಮಾಪನ)
ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು